# 9

# ಚಿಕ್ಕ ಪ್ರಾರ್ಥನೆಗಳಲ್ಲ

ಎಲ್ಲರೂ ಪ್ರಾರ್ಥನೆಯಲ್ಲಿ ನಂಬುವರು ... ಎಲ್ಲರೂ ಪ್ರಾರ್ಥನೆಯ ಬಗ್ಗೆ ಸಂಶಯ ಪಡುವರು ... ಕೆಲವರು ಪ್ರಾರ್ಥನೆಯನ್ನು ಕೇವಲ ಸ್ವಯಂ - ಸೂಚನೆಯಂತೆ ನೋಡುವರು; ಇತರರು ಅದನ್ನು ಬಲವಾದ ಅದ್ಭುತ ಕಾರ್ಯದಂತೆ ನೋಡುವರು; ಇನ್ನೂ ಇತರರು ಈ ಎರಡು ಅತಿರೇಕಗಳ ಮಧ್ಯದಲ್ಲಿ ಇರುವರು. ಜನರು ಇಂದು ಪ್ರಾರ್ಥನೆಯ ಬಗ್ಗೆ ಕೆಲವೊಂದನ್ನು ನಂಬುವರು ಬುದ್ಧಿಗೆಟ್ಟ ಭಾವನೆಯಿಂದ ತಣ್ಣಗಾದ ತರ್ಕಶಾಸ್ತ್ರದವರೆಗೆ ಅವರು ಪ್ರಾರ್ಥನೆಯ ಒಂದು ರೀತಿಯನ್ನು ರೂಢಿಸುವರು. ಒಬ್ಬ ಪ್ರಸಂಗಿಯು ತನ್ನಿಂದ ನಿರೀಕ್ಷಿಸಲ್ಪಟ್ಟ ಸೇವೆಯಲ್ಲಿ ಒಂದು ಆಸ್ಪತ್ರೆಯಲ್ಲಿದ್ದನು - ರೋಗಿಗಳಿಗೆ ಸೇವೆ ಮಾಡುವುದು. ಒಬ್ಬ ಸಭಾಸದಸ್ಯನು, ಕಠಿಣವಾದ ಶಸ್ತ್ರಚಿಕಿತ್ಸೆಯನ್ನು ಎದುರಿಸುತ್ತಿದ್ದಾಗ, "ಪ್ರಸಂಗಿಯೇ, ನನಗಾಗಿ ಒಂದು ಚಿಕ್ಕ ಪ್ರಾರ್ಥನೆಯನ್ನು ಮಾಡು" ಎಂದು ಉಸುರಿದನು. "ಇಲ್ಲ, ನಾನು *ಮಾಡುವದಿಲ್ಲ!*" ಎಂದು ಪ್ರಸಂಗಿಯು ಹೇಳಿದಾಗ ಆ ರೋಗಿಯನ್ನು ಆಘಾತಕ್ಕೊಳಪಡಿಸಿದನು. ಚಿಕ್ಕ ಪ್ರಾರ್ಥನೆಗಳು ಇರುವದಿಲ್ಲ ಎಂದು ಹೇಳಿದನು! ಆಮೆನ್! ಸಮಾಜ ಕೂಟಗಳಲ್ಲಿ ಅರ್ಪಿಸಲ್ಪಡುವ ಹುರುಳಿಲ್ಲದ ಪ್ರಾರ್ಥನೆಗಳು ನನ್ನನ್ನು ಬೇಸರಗೊಳಿಸುತ್ತವೆ, ಆದರೆ ಅವು ಒಂದು ಪರಿಣಾಮ ಮಾಡಬಹುದು - ಅವು ಮಾಡಲ್ಪಡತಕ್ಕದ್ದು. ದೇವರು ನಮ್ಮ ಜೀವಿತಗಳಲ್ಲಿ ಬಿಡಲ್ಪಡಬೇಕು ಮತ್ತು ಬಯಸಲ್ಪಡತಕ್ಕದ್ದು. ಶಸ್ತ್ರ ಚಿಕಿತ್ಸೆಯನ್ನು ಹೊಂದಬೇಕಾಗಿದ್ದ ಮನುಷ್ಯನೊಂದಿಗೆ ನಾವು ಸಹಾನುಭೂತಿ ವ್ಯಕ್ತಪಡಿಸುತ್ತೇವೆ, ಆದರೆ ಅವನು ಎರಡು ನಿರ್ಣಾಯಕ ತಪ್ಪುಗಳನ್ನು ಮಾಡಿದನು: (1) ಅವನು ತನ್ನ ಅಸ್ವಸ್ಥತೆಯ ಗಂಭೀರತೆಯನ್ನು ಎದುರಿಸದವನಾಗಿದ್ದನು, ಮತ್ತು (2) ನಂಬಿಗಸ್ತ ಪ್ರಾರ್ಥನೆಯಲ್ಲಿ ದೇವರಿಗೆ ತನ್ನನ್ನು ಬಿಟ್ಟುಕೊಡಲಾರದವನಾಗಿದ್ದನು. ಪ್ರಾರ್ಥನೆಯು ಒಂದು ಅದ್ಭುತ ಕಾರ್ಯವಾಗಿರುವದಿಲ್ಲ. ಪ್ರಾರ್ಥನೆಯು ಆಧ್ಯಾತ್ಮಿಕವಾದದ್ದಾಗಿರುವದಿಲ್ಲ. ಪ್ರಾರ್ಥನೆಯು ಮಾಂತ್ರಿಕ ವೈದ್ಯನ ಇಲ್ಲವೇ ಶಾಮಾನನ ಉಪಕರಣವಾಗಿರುವದಿಲ್ಲ. ಪ್ರಾರ್ಥನೆಯು ಪುರಾತನ ಮೂಢನಂಬಿಕೆಯಾಗಿರುವದಿಲ್ಲ.

ಪ್ರಾರ್ಥನೆಯು ದೇವರನ್ನು ... ಸೃಷ್ಟಿಕರ್ತನನ್ನು, ರಕ್ಷಕನನ್ನು, ನ್ಯಾಯಾಧೀಶನನ್ನು ಕರೆಯುತ್ತದೆ! ಪ್ರಾರ್ಥನೆಯು ಶುಭಶಕುನಕ್ಕೆ, ಒಂದು ಧಾರ್ಮಿಕ ಮೊಲದ ಪಾದಕ್ಕೆ ಇಳಿಸಲ್ಪಡಬಾರದು. ರೋಗಿಗಳು ಏನನ್ನು ಬಯಸುತ್ತಾರೆ ಎಂಬುದು ನನಗೆ ತಿಳಿದಿದೆ - ಆದಾಗ್ಯೂ "ಒಂದು ಚಿಕ್ಕ ಪ್ರಾರ್ಥನೆಗಾಗಿ ಬೇಡಿಕೊಳ್ಳುವಾಗ" ನಾನು ಮನಮರುಗುತ್ತೇನೆ. ಪ್ರಾರ್ಥನೆಯು ಗೊಂಬೆಯಂತೆ ಮಾತನಾಡುವುದಾಗ ಬಾರದು, "ಓಟದ - ಮೇಲೆ - ಪ್ರಾರ್ಥನೆ" ಅಲ್ಲದೆ "ಚಿನ್ನಹದಿಂದ ಪ್ರಾರ್ಥನೆ"ಯೊಂದಿಗೆ ಪ್ರಾರ್ಥನೆಯನ್ನು ದೇವ ವಂಚನೆಗಾಗಿ - ಬಹಳಷ್ಟು ಗಂಡಾಂತರಗಳಿವೆ. (ನಾವು ದೇವರೊಂದಿಗೆ ವ್ಯವಹರಿಸುತ್ತಲಿದ್ದೇವೆ!) ಅಲೆ ಕ್ಸಾಂಡ್ರಿಯದ ಕ್ಲೆಮೆಂಟನು ಪ್ರಾರ್ಥನೆಯನ್ನು "ದೇವರೊಂದಿಗೆ ಸಹವಾಸದಲ್ಲಿರುವುದು" ಎಂದು ಕರೆದಿದ್ದಾನೆ. "ಒಂದು ಚಿಕ್ಕ ಪ್ರಾರ್ಥನೆಯನ್ನು" ಉಚ್ಚರಿಸಬೇಡಿರಿ; ಅದರ ಬದಲು, ಮುರಿದ ಹೃದಯದಿಂದ, ಜೀವಿಸುವ ದೇವರಿಗೆ ಚಿನ್ನಹಮಾಡಿರಿ. ನಾವು ಒಬ್ಬರಿಗೋಸ್ಕರ ಒಬ್ಬರು ಪ್ರಾರ್ಥಿಸಬೇಕಾಗಿದೆ (ಯಾಕೋಬ 5); ಹೀಗಿದ್ದರೂ "ಒಂದು ಚಿಕ್ಕ ಪ್ರಾರ್ಥನೆಯನ್ನು ಹೇಳಲು"

ಬೇಡಿಕೆಯು ಅನೇಕ ಸಲ ದೇವರ ಪ್ರಸಂಗಿಗಳಾಗಿ ಕಾದಿರಿಸಲ್ಪಟ್ಟಿದೆ! ಹೌದು, ನಾನು ಆಸ್ಪತ್ರೆಯಲ್ಲಿ ಪ್ರಾರ್ಥಿಸುತ್ತೇನೆ (ರೋಗಿಗಳು ಒಂದು "ಚಿಕ್ಕ ಪ್ರಾರ್ಥನೆಗಾಗಿ" ಕೇಳುವಾಗಲೂ ಸಹ). ಹೌದು, ನಾನು ಪ್ರಾರ್ಥಿಸುತ್ತೇನೆ (ಅವರು ಕೇಳದೇ ಇರುವಾಗಲೂ ಸಹ). ಪ್ರಾರ್ಥನೆಯು ಪ್ರೀತಿಯಾಗಿದೆ. ಆಸ್ಪತ್ರೆಯು ಬೋಧಿ ಸುವದಕ್ಕೆ ಮತ್ತು ಗದರಿಸಲಿಕ್ಕೆ ಸ್ಥಳವಾಗಿರುವದಿಲ್ಲ. ರೋಗಿಗಳಿಗಾಗಿ ಪ್ರಾರ್ಥನೆಯು ಪ್ರಸಂಗಿಗಳಾಗಿ ಮಾತ್ರವೇ ಇರುವುದಿಲ್ಲವಾದದ್ದರಿಂದ ದೇವರಿಗೆ ಉಪಕಾರವಾಗಲಿ. ಅದು ರಹಸ್ಯ ಪಾಸ್‌ವರ್ಡಿನೊಂದಿಗೆ ಇರುವ ವಿಶೇಷ ವ್ಯಕ್ತಿಗಾಗಿ ಇರುವುದಿಲ್ಲ. ಎಲ್ಲಾ ಸಹೋದರರು ಎಲ್ಲಾ ಸಹೋದರರಿಗೆ ಪ್ರಾರ್ಥಿಸಬಹುದು. "ಹಿರಿಯರನ್ನು ಕರೆಯಿಸಲಿ" ಎಂದು ಯಾಕೋಬನು ಹೇಳಿದನು, "ಪ್ರಸಂಗಿಗಳನ್ನು" ಕರೆಯಿರಿ ಎಂದು ಹೇಳಲಿಲ್ಲ. ರೋಗಿಗಳಲ್ಲಿ ದೇವರಿಗೆ ಆಸಕ್ತಿಯಿರುತ್ತದೆ. ಹಾಗಿದ್ದರೂ, ನಮ್ಮ ಕ್ರೈಸ್ತತ್ವದ ರುಜುವಾತು ನಮ್ಮ ಉನ್ನತ ಅನುಭವಗಳಲ್ಲಿ ಇಲ್ಲವೇ ಪ್ರಾರ್ಥನೆಯು ಕಾರ್ಯಮಾಡಿದ ಉದಾಹರಣೆಗಳಲ್ಲಿ ಇರುವುದಿಲ್ಲ ಎಂಬುದನ್ನು ಯಾವಾಗಲೂ ನಮ್ಮ ಜ್ಞಾಪಕಕ್ಕೆ ತಂದುಕೊಳ್ಳಬೇಕು. ದೇವರು ಆಜ್ಞಾಪಿಸುವುದರಲ್ಲಿ ಇದ್ದಾನೆ. ಕೆಲವು ಸಲ ನಾವು ಪ್ರಾರ್ಥಿಸುತ್ತೇವೆ ಮತ್ತು ಜನರು ಗುಣಪಡಿಸಲ್ಪಡುತ್ತಾರೆ; ಇತರ ಸಮಯಗಳಲ್ಲಿ ನಾವು ಪ್ರಾರ್ಥಿಸುತ್ತೇವೆ ಮತ್ತು ಜನರು ಸಾಯುತ್ತಾರೆ. ಪ್ರಾರ್ಥನೆಯು ವಿವರಣೆಗಳನ್ನು ಒದಗಿಸುವದಿಲ್ಲ. ಆಸ್ಪತ್ರೆಯ ಸಂದರ್ಶನದಲ್ಲಿ ಎರಡು ಸುಲಭ ನಿಯಮಗಳನ್ನು ಅನುಸರಿಸಬೇಕು: (1) ತೋರಿಸಿ ಕೊಡು, ಮತ್ತು (2) ಸುಮ್ಮನಿರು. ನೀನು ಅಲ್ಲಿ ಇರುತ್ತೀ, ದೇವರು ಅಲ್ಲಿ ಇರುತ್ತಾನೆ. *ಆನಂದಪಡು!*

ದೇವರು ಪ್ರಸನ್ನನಾಗಿರುವುದರಿಂದ, ಬೇಡಿಕೋ, ಹುಡುಕು, ಮತ್ತು ತಟ್ಟು! ನಮ್ಮ ಹೆಚ್ಚಾದವರು ಆಸ್ಪತ್ರೆಯಲ್ಲಿ ಔಷದಕ್ಕೆ ಕಿವಿಗೊಡುತ್ತೇವೆ. ರೋಗವು ಔಷಧದಿಂದ ಅಂತ್ಯಗೊಳ್ಳಬಹುದು, ಆದರೆ ದೇವರೊಂದಿಗೆ ಅಲ್ಲ! ವೈದ್ಯರು ದೇವರಲ್ಲ. ವೈದ್ಯರು ಚಿಕಿತ್ಸೆ ಮಾಡುತ್ತಾರೆ, ಆದರೆ ದೇವರು ಗುಣಪಡಿಸುತ್ತಾನೆ. ಕುಟುಂಬವು ಅತೀ ಕೆಟ್ಟದ್ದನ್ನೂ ಸ್ವೀಕರಿಸಬೇಕೆಂದು ಅನೇಕರು ಪ್ರಾರ್ಥಿಸುತ್ತಾರೆ. ರೋಗಿಯು ಗುಣಪಡಿಸಲ್ಪಡಬೇಕೆಂದು ಪ್ರಾರ್ಥಿಸಿರಿ - ಆ ಮೇಲೆ ಕುಟುಂಬಕ್ಕಾಗಿ ಪ್ರಾರ್ಥಿಸಿರಿ. ಕುಟುಂಬದವರು ಬಲಹೀನರೂ ಹಟಮಾರಿಗಳೂ ಆಗಿದ್ದರೂ, ಕುಟುಂಬಕ್ಕೆ ಪ್ರಸಂಗಿಸಬೇಡಿರಿ. ಪ್ರಾರ್ಥನೆಯು "ಭಯಪಡಿಸುವ ಪೀಠವಾಗಿರುವದಿಲ್ಲ." ರೋಗಿಗಾಗಿ ದೇವರನ್ನು ಪ್ರಾರ್ಥಿಸಿರಿ! ಆಮೇಲೆ, ದಾವೀದನಂತೆ, ಮರಣವು ಬಂದರೆ ದೇವರ ಚಿತ್ತವನ್ನು ಸ್ವೀಕರಿಸಿರಿ! ನಾವು ಯಾಕೆ ಪ್ರಾರ್ಥಿಸಬೇಕು? ಯಾಕಂದರೆ ದೇವರು ಪ್ರಾರ್ಥನೆಗೆ ಉತ್ತರ ಕೊಡುತ್ತಾನೆ! ಪ್ರಾರ್ಥನೆಯು ಅರ್ಧಮನಸ್ಸಿನ ಅನ್ವೇಷಕರಿಗಾಗಿ ಇರುವದಿಲ್ಲ. ಪ್ರಾರ್ಥನೆಯು ದೇವರಲ್ಲಿ ನಂಬಿಕೆಯಿಂದ ಬರುತ್ತದೆ.

ಎಲ್ಲಿ ಬಲಹೀನತೆ ಇರುವುದಿಲ್ಲವೋ, ಅಲ್ಲಿ ದೇವರ ಬಲಕ್ಕೆ ಸ್ಥಳವಿರುವದಿಲ್ಲ. ಒಂದು ಚಿಕ್ಕ ಮಗವು ಒಂದು ಕೆಟ್ಟ ಚಿತ್ರವನ್ನು ತೆಗೆಯುವದಿಲ್ಲ. ಆ ಮಗುವಿನ ಪ್ರಯತ್ನಕ್ಕಾಗಿ ಜಂಭಕೊಚ್ಚಿಕೊಳ್ಳುತ್ತೇವೆ. ಭಕ್ತಿಯಲ್ಲಿರುವ ಯಾವುದೇ ನಂಬಿಗಸ್ತ ಕ್ರೈಸ್ತನು ಕೆಟ್ಟ ಪ್ರಾರ್ಥನೆಯನ್ನು ಅರ್ಪಿಸುವದಿಲ್ಲ! ಪ್ರಾರ್ಥಿಸಿರಿ! ಅಜ್ಞಾನ, ವಿಗ್ರಹಾರಧನೆ, ಮತ್ತು ಸ್ವಾರ್ಥತೆಯನ್ನು ಬಿಟ್ಟು *ಪ್ರಾರ್ಥಿಸಿರಿ!* ಅತಿ ಕಠಿಣವಾದ ಸಂದರ್ಭಗಳಲ್ಲಿಯೂ ಸಹ ಪ್ರಾರ್ಥಿಸಿರಿ. ಯಾಕೆ? *ಯಾಕಂದರೆ ಚಿಕ್ಕ ಪ್ರಾರ್ಥನೆಗಳು ಇರುವದಿಲ್ಲ!* ನಿಮ್ಮ ಮೊಣಕಾಲುಗಳ ಮೇಲೆ ಪ್ರಾರ್ಥಿಸಿರಿ ... ಅಷ್ಟೇ ಸಮನಾಗಿ ನಿಮ್ಮ ನಿಮ್ಮ ತುದಿಗಾಲುಗಳ ಮೇಲೆ, ದೇವರ ಮಹಿಮೆಯನ್ನು ನಿರೀಕ್ಷಿಸುತ್ತ ಪ್ರಾರ್ಥಿಸಿರಿ!

# ಕರ್ತನ ಪ್ರಾರ್ಥನೆ

## ಮತ್ತಾಯ 6:9-13

*"ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ, ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ. ನಮ್ಮ ಅನುದಿನದ ಆಹಾರವನ್ನು ಈ ಹೊತ್ತೂ ದಯಪಾಲಿಸು. ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸಿದಂತೆ ನಮ್ಮ ತಪ್ಪುಗಳನ್ನು ಕ್ಷಮಿಸು. ನಮ್ಮನ್ನು ಶೋಧನೆಯೊಳಗೆ ಸೇರಿಸದೆ ಕೇಡಿನಿಂದ ನಮ್ಮನ್ನು ತಪ್ಪಿಸು. '[ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಸದಾಕಾಲ ನಿನ್ನವೇ. ಆಮೆನ್]' " (ಮತ್ತಾಯ 6:9-13; ನೋಡಿರಿ ಲೂಕ 11:2-4).*

ಈ ಪಾಠಗಳನ್ನು ಬರೆಯುವುದು ನನ್ನ ಸೇವೆಯಲ್ಲಿ ಅತಿ ದೀನನನ್ನಾಗಿ ಮಾಡುವ ಅನುಭವವಾಗಿತ್ತು. ಪ್ರಾರ್ಥನೆಯು ದೇವರಿಗೆ ಭಕ್ತಿಭಾವ ತೋರಿಸುವುದು, ಆತನಿಗೆ ಅಧೀನನಾಗಿರುವುದು ಆಗಿರುತ್ತದೆ. ನಾನು ದೇವರೊಂದಿಗೆ ಮಾತಾಡಬಹದು! ನಾನು ದೇವರನ್ನು ಆಲಿಸಬಹುದು! ದೇವರು ನನ್ನ ಜೀವನದಲ್ಲಿ ಅನುದಿನವೂ ಕಾರ್ಯನಿರತನಾಗಿರುವನು! ಈಗ ನಾವು "ಕರ್ತನ ಪ್ರಾರ್ಥನೆಗೆ" ಬರುತ್ತೇವೆ. ನನ್ನ ಪೆನ್ನು ನಡುಗುತ್ತದೆ - ಇದು ಪರಿಶುದ್ಧ ನೆಲವಾಗಿರುತ್ತದೆ. ಅದರಿಂದ ಕೆಲವರು ಮುಜುಗರ ಪಟ್ಟುಕೊಳ್ಳುತ್ತಾರೆ - ಅವರು ಹಾಗೆ ಯಾಕೆ ಮಾಡಬೇಕು? ಕ್ರಿಸ್ತನು ಅದರ ಕರ್ತೃವಾಗಿರುತ್ತಾನೆ; ಅದು ಆತನಿಗೆ ಒಳಪಟ್ಟಿರುತ್ತದೆ - ಪೇತ್ರನಿಗೆ ಅಲ್ಲ, ಪೌಲನಿಗೆ ಅಲ್ಲ. ಗ್ರಂಥಕರ್ತನು ತಾನು ಬರೆದ ಪುಸ್ತಕವನ್ನು ತನ್ನದನ್ನಾಗಿ ಮಾಡಿಕೊಳ್ಳಲು ಅದನ್ನು ಓದಬೇಕಾಗಿಲ್ಲ - ಅವನು ಅದನ್ನು ಬರೆದನು. ಅದನ್ನು ಹಾಡುವವರನ್ನು ಕೆಲವರು ಖಂಡಿಸುತ್ತರೆ. ಇದು ಹೆಚ್ಚು ದೊಡ್ಡ ಸಮಸ್ಯೆಗಳನ್ನು ಹುಟ್ಟಿಸುತ್ತದೆ - ಪರಿಶುದ್ಧ ಬರಹವನ್ನು ಹಾಡುವುದು ತಪ್ಪೇ?

"ನಮಗೆ ಪ್ರಾರ್ಥನೆ ಮಾಡುವದನ್ನು ಕಲಿಸು" ಎಂದು ಶಿಷ್ಯರು ಬೇಡಿಕೊಂಡರು. ಯೇಸುವು ಹಾಗೆ ಮಾಡಿದನು. ಆತನು ಅವರಿಗೆ ಒಂದು ಪ್ರಾರ್ಥನೆ ಕೊಟ್ಟನು. ಆತನು ಅವರಿಗೆ ಒಂದು ವಿಧಾನವನ್ನು, ಒಂದು ಸೂತ್ರವನ್ನು, ಒಂದು ಆರಾಧನಾಕ್ರಮವನ್ನು, ಒಂದು ಹಾಡನ್ನು, ಒಂದು ಪದ್ಧತಿಯನ್ನು ಕೊಡಲಿಲ್ಲ - ಆತನು ಅವರಿಗೆ ಒಂದು ಪ್ರಾರ್ಥನೆಯನ್ನು ಕೊಟ್ಟನು. ಈ ಚಿಕ್ಕದಾದ, ಸರಳವಾದ ಪ್ರಾರ್ಥನೆಯಲ್ಲಿ, ಪ್ರಾರ್ಥನೆಯ ಎಲ್ಲಾ ತತ್ವಗಳು ಇದ್ದವು. ಇದು ಹೇಗೆ ಪ್ರಾರ್ಥಿಸಬೇಕು ಎಂದು ಯೇಸುವು ನಮಗೆ ಹೇಳುವುದಾಗಿದೆ. "ನೀನು ಪ್ರಾರ್ಥಿಸುವಾಗ, ಹೇಳು" ಎಂದು ಲೂಕನು ಪ್ರಕಟಿಸುತ್ತಾನೆ. ಈ ಪ್ರಾರ್ಥನೆಯನ್ನು ಕಂಠಪಾಠ ಮಾಡುವುದು ಪರಿಶುದ್ಧ ಬರಹಕ್ಕನುಗುಣವಾಗಿದೆ (ಯೇಸುವು ಮಾಡಿದಂತೆ) ಈ ಪ್ರಾರ್ಥನೆಯನ್ನು ಬೋಧಿಸುವುದು ಪರಿಶುದ್ಧಬರಹಕ್ಕನುಗುಣವಾಗಿದೆ. ಈ ಮಾದರಿಯು ಎಲ್ಲಾ ಪ್ರಾರ್ಥನೆಗಳನ್ನು ಒಳಗೊಂಡಿರುತ್ತದೆ. ಇದು ಪ್ರಾಥಮಿಕವಾದದ್ದೂ, ಸಾಮಾನ್ಯವಾದದ್ದೂ ಆಗಿರುತ್ತದೆ. ಇದು ತೊಟ್ಟಿಲಿನಿಂದ ಸಮಾಧಿಯ ವರೆಗೆ ಪ್ರಸ್ತುತವಾದದ್ದಾಗಿರುತ್ತದೆ. ಅದನ್ನು ಸುಮ್ಮನೇ "ಬಿಟ್ಟು ಬಿಡಬಹುದೋ"? ಇದು ಅಸಂಭವದ್ದಾಗುತ್ತದೆ!

ಒಂದು ಅನಂತವಾದ ವಿಷಯವು (ಪ್ರಾರ್ಥನೆ) ಕೆಲವು, ಸರಳ ಪದಗಳಿಗೆ ಇಲ್ಲಿ ಕಡಿಮೆ ಮಾಡಲ್ಪಟ್ಟಿದೆ. ಕೀರ್ತನೆ 23ರ ನಂತರ, ಅದು ಬೈಬಲಿನಲ್ಲಿ ಅತಿ ಹೆಚ್ಚಾಗಿ ತಿಳಿಯಲ್ಪಟ್ಟ ಮತ್ತು ಅತೀ ಹೆಚ್ಚಾಗಿ ಉಪಯೋಗಿಸಲ್ಪಟ್ಟ ಪಠ್ಯವಾಗಿದೆ. ಸಂಕ್ಷಿಪ್ತತೆಯು ಆಘಾತಪಡಿಸುವಂಥದ್ದಾಗಿದೆ. ಉದ್ದವಾದ ಪ್ರಾರ್ಥನೆಗಳು (ಉದ್ದವಾದ ಪ್ರಸಂಗಗಳಲ್ಲ) ಪರಿಶುದ್ಧ ಬರಹಗಳಲ್ಲಿ ಖಂಡಿಸಲ್ಪಟ್ಟಿವೆ. "ಅವನು ಮನೆಯಲ್ಲಿ ತನ್ನ ಏಕಾಂತ ಕೋಣೆ ಯಲ್ಲಿ ಅವನು ಸಾಕಷ್ಟು ಪ್ರಾರ್ಥಿಸುತ್ತಿರುವದಿಲ್ಲ" ಎಂದು ದೇವಾಲಯದಲ್ಲಿ ಬಹಳ ಉದ್ದವಾಗಿ ಪ್ರಾರ್ಥಿಸುತ್ತಿದ್ದ ಸಹೋದರನ ಬಗ್ಗೆ ಒಬ್ಬ ಮನುಷ್ಯನ ಗಮನಿಸಿದನು. ಕರ್ತನ ಪ್ರಾರ್ಥನೆಯು ಒಂದು ನಿಮಿಷಕ್ಕಿಂತ ಕಡಿಮೆ ಅವಧಿಯಲ್ಲಿ ಹೇಳಲ್ಪಡಬಹುದು, ಆದರೆ ಅದು ಎಲ್ಲವನ್ನೂ ಒಳಗೊಂಡಿರುತ್ತದೆ:

(1) ಮೊದಲನೆಯ ಭಾಗವು (ಅನುದಿನದ ರೊಟ್ಟಿ) ದೈಹಿಕ ಅಗತ್ಯತೆಗಳಿಗೆ ಸಂಬಂಧಿಸಿರುತ್ತದೆ.

(2) ಎರಡನೆಯದು (ಕ್ಷಮಾಪಣೆ) ಸಾಂಬಂಧಿಕ ಅಗತ್ಯತೆಗಳಿಗೆ ಸಂಬಂಧಿಸುತ್ತದೆ.

(3) ಮೂರನೆಯದು (ಶೋಧನೆ) ಆತ್ಮಿಕ ಅಗತ್ಯತೆಗಳನ್ನು ಸಂಬಂಧಿಸಿರುತ್ತದೆ.

ಆಳವಾದ ಪ್ರಾರ್ಥನೆಯು ಬಹಳ ಸರಳವಾದದ್ದಾಗಿರುತ್ತದೆ. ಬೈಬಲಿನ ದೊಡ್ಡ ವ್ಯಕ್ತಿಗಳ ಪ್ರಾರ್ಥನೆಗಳು ಸರಳತೆಯನ್ನು ಪ್ರಕಟಿಸುತ್ತವೆ. ವಿವರವಾದ ಪದಸಂಗ್ರಹ ಬೇಕಾಗಿರುವದಿಲ್ಲ.

ಅದು ನಿನ್ನ ಪ್ರಾರ್ಥನೆಗಳ ಉದ್ದಳತೆಯಾಗಿರುವದಿಲ್ಲ -
ಅದು ಎಷ್ಟೋ ಉದ್ದವಾಗಿರಬಹುದು.
ಅದು ನಿನ್ನ ಪ್ರಾರ್ಥನೆಗಳ ಸಂಖ್ಯೆಯಾಗಿರುವದಿಲ್ಲ -
ಅವು ಎಷ್ಟು ಇರುವವು.
ಅದು ನಿನ್ನ ಪ್ರಾರ್ಥನೆಗಳ ಪದಗಳಾಗಿರುವದಿಲ್ಲ -
ಕೇಳಲು ಎಷ್ಟು ಆನಂದ.
ಅದು ನಿನ್ನ ಪ್ರಾರ್ಥನೆಗಳ ಭಾಷಣ ಕಲೆಯಲ್ಲ -
ಅವು ಎಷ್ಟು ಜನರನ್ನು ಸಂತುಷ್ಟಪಡಿಸುವವು.
ಅದು ನಿನ್ನ ಪ್ರಾರ್ಥನೆಗಳ ಎತ್ತರವಾಗಿರುವದಿಲ್ಲ -
ಅವು ಎಷ್ಟು ಎತ್ತರವಾಗಿ ಕೇಳಿಸುವವು.
ಅದು ನಿನ್ನ ಪ್ರಾರ್ಥನೆಗಳ ಅಗಲವಾಗಿರುವದಿಲ್ಲ -
ಅವು ಎಷ್ಟು ದೂರ - ತಲುಪುವವುಗಳಾಗಿರುವವು.
ಆದರೆ ಅದು ನಿನ್ನ ಪ್ರಾರ್ಥನೆಗಳ ಬಲವಾಗಿರುವುದು
ದೇವರೊಂದಿಗೆ ಸರಿಯಾಗಿರುವ ಹೃದಯದಿಂದ!

ಮಾದರಿ ಪ್ರಾರ್ಥನೆಯು ಪರಿಪೂರ್ಣವಾದದ್ದಾಗಿರುವುದು - ಎಲ್ಲಾ ವಿಷಯಗಳಲ್ಲಿ ಸಂಪೂರ್ಣವಾದದ್ದಾಗಿರುವುದು. ಸರಳವಾದದ್ದೂ ಚಿಕ್ಕದಾದದ್ದೂ ಆಗಿದ್ದರೂ, ಅದಕ್ಕೆ ಏನನ್ನೂ ಕೂಡಿಸಲಾಗುವದಿಲ್ಲ. ಅದರಲ್ಲಿ ಸ್ತೋತ್ರವಿದೆ, ಉಪಕಾರವಿದೆ, ನಂಬಿಕೆಯಿದೆ, ಬಿನ್ನಹವಿದೆ, ಕ್ಷಮಾಪಣೆಯಿದೆ ಮತ್ತು ಮಾರ್ಗದರ್ಶನವಿದೆ. ಉಲ್ಲೇಖಿಸಲು ಅದು ಅರ್ಜಿಯಾಗಿರುವದಿಲ್ಲ, ಆದರೆ ಅನುಸರಿಸಬೇಕಾದ ವಿಧಾನವಾ ಗಿರುವುದು. ಅದ ರೊಂದಿಗೆ ಪರಿಚಿತಿಯುಳ್ಳವರಾಗಿರಿ.

# “ಪರಲೋಕದಲ್ಲಿರುವ ನಮ್ಮ ತಂದೆಯೇ”

ಅಲ್ಲಿ ಮೇಲೆ ದೇವರು ಇರುವನೋ?
ಆತನು ತಿಳಿದಿರುವನೋ? ಜೋಪಾಸನ ಮಾಡುವನೋ? ಕಾರ್ಯ ಸಾಧಿ
ಸುವನೋ?
ಆತನು ನನ್ನನ್ನು ತಿಳಿದಿರುವನೋ ಮತ್ತು ನನ್ನ ಬಗ್ಗೆ ಚಿಂತಿಸುವನೋ?

ಇದು ಮನುಷ್ಯನ ಬದಲಾಗದ ಸ್ಥಿತಿಯಾಗಿರುವುದು ಈ ಕಾರಣದಿಂದ ಮನುಷ್ಯನು ಪ್ರಾರ್ಥನೆಯನ್ನು ಬಯಸುತ್ತಾನೆ. ಯೇಸುವು ಈ ಎಲ್ಲಾ ಪ್ರಾರ್ಥನೆಗಳಿಗೆ ಉತ್ತರವನ್ನು ಕೊಡುತ್ತಾನೆ, “ಹೌದು!” ಎಂದು ಒಂದು ಪ್ರಭುತ್ವವುಳ್ಳ ವಾಕ್ಯದಲ್ಲಿ ನಮ್ಮ ದೀನತೆಗೆ ಭರವಸೆ ಕೊಡಲ್ಪಟ್ಟಿದೆ, ನಮ್ಮ ಗೌರವವು ಸ್ಥಾಪಿಸಲ್ಪಟ್ಟಾಗಲೂ ಹಾಗೆ ಮಾಡಲ್ಪಟ್ಟಿದೆ.

*“ತಂದೆ!”* ಜಗತ್ತು ದೇವರನ್ನು ತಂದೆಯಂತೆ ಎಂದೂ ನೋಡಿರುವದಿಲ್ಲ. ಯೆಹೂದ್ಯರು ಸಹ ದೇವರ ಪಿತೃತ್ವವನ್ನು ಇಡೀ ಯೆಹೂದಿ ಜನಾಂಗಕ್ಕೆ ಅನ್ವಯಿಸಿದಂತೆ ಮಾತ್ರವೇ ನೋಡಿತು. ಒಬ್ಬ ವೈಯಕ್ತಿಕ “ದೇವರು - ತಂದೆ” ಎಂಬ ವಿಚಾರವು ಎಂದೂ ಯೋಚಿಸಲ್ಪಟ್ಟಿರಲಿಲ್ಲ. ಯೇಸುವು ದೇವರನ್ನು ತಂದೆಯಂತೆ ಪ್ರಕಟಿಸಿದನು (ಮತ್ತಾಯ 7:11, 12; ಲೂಕ 11:11-13). ಯೇಸುವು ದೇವರನ್ನು “ದೇವರು” ಎಂದು ಕರೆದ ಒಂದೇ ಸಮಯವು, ಶಿಲುಬೆಯ ಮೇಲೆ, ದೇವರು ಯೇಸುವನ್ನು ಪಾಪವಾಗ ಮಾಡಿದಾಗ. ದೇವರು “ತಂದೆ” ಎಂದು ಹೊಸ ಒಡಂಬಡಿಕೆಯಲ್ಲಿ ಕನಿಷ್ಠಪಕ್ಷ 360 ಸಲ ಕರೆಯಲ್ಪಟ್ಟಿದ್ದಾನೆ. ದೇವರು ವ್ಯಕ್ತಿ ಸಂಬಂಧವಿಲ್ಲದ ನ್ಯಾಯಾಧೀಶನಾಗಿರುವದಿಲ್ಲ, ಆದರೆ ಪ್ರೀತಿಸುವ ತಂದೆಯಾಗಿದ್ದಾನೆ. ಒಳ್ಳೆಯ ತಂದೆಯ ಅಮೂಲ್ಯವಾದ ಸ್ಮರಣೆಗಳೇ! ಮಾರ್ಟಿನ್ ಲೂಥರನು ದೇವರನ್ನು ತಂದೆಯಂತೆ ಅಪ್ಪಿಕೊಳ್ಳಲಾರದವನಾಗಿದ್ದನು, ಯಾಕಂದರೆ ಅವನಿಗೆ ಕೀಳುಮನಸ್ಸಿನ ತಂದೆಯಿದ್ದನು. ಅತೀ ದೊಡ್ಡ ಆಶೀರ್ವಾದವು ದೇವರು ತಾನೇ ಆಗಿದ್ದನು. ತನ್ನನ್ನು ಬಯಸದೆ ಒಬ್ಬನು ಕೊಡುವದನ್ನು ಬಯಸುವುದು ಸ್ನೇಹತ್ವಕ್ಕೆ ಅಪಚಾರಮಾಡುವಂಥದ್ದಾಗಿರುತ್ತದೆ. ದಂಗೆಖೋರ ತಪ್ಪಿಹೋದ ಮಗನು ತನ್ನ ತಂದೆಯ ಹಣವನ್ನು ಬಯಸಿದನು, ಆದರೆ ತನ್ನ ತಂದೆಯನ್ನಲ್ಲ. ಪಶ್ಚಾತ್ತಾಪಪಟ್ಟ ತಪ್ಪಿಹೋದ ಮಗನು ಕೇವಲ ತಂದೆಯನ್ನು ಬಯಸಿದನು. ಪರಲೋಕವು ದೇವರು ಆಗಿದೆ! ದೇವರು ನಮ್ಮ ತಂದೆಯು! ಇದು ಪ್ರೀತಿಗೆ ಪ್ರತ್ಯುತ್ತರ ಕೊಡುವ ಪ್ರೀತಿಯಾಗಿದೆ. ದೇವರು, ಪ್ರಾರ್ಥನೆಯ ಗುರಿಯು, ಆ ಆರಾಧನೆಗೆ ಪ್ರೇರಣೆಯಾಗುತ್ತಾನೆ. ಆತನನ್ನು ನೋಡುವುದು ಆತನನ್ನು ಪ್ರೀತಿಸುವುದಾಗಿದೆ. ಆತನನ್ನು ಪ್ರೀತಿಸುವುದು ಆತನನ್ನು ಆರಾಧಿಸುವುದಾಗಿದೆ.

“ಅಬ್ಬಾ!” ಯೇಸು ಮುಂದೆ ಹೋದನು. ತಂದೆಗಾಗಿ *“ಅಬ್ಬಾ”* ಎಂಬ ಅರಮಾಯ ಪದವನ್ನು ಆತನು ಉಪಯೋಗಿಸಿದನು. ಯೆಹೂದಿ ಮಕ್ಕಳು ಕಲಿಯುವ ಮೊದಲನೆಯ ಪದಗಳು “ಅಬ್ಬಾ” ಮತ್ತು “ಇಮ್ಮಾ” - “ಡ್ಯಾಡಿ” ಮತ್ತು “ಮಮಾ” ಎಂಬವುಗಳಾಗಿದ್ದವು. ಯೇಸುವಿಗೆ ದೇವರೊಂದಿಗಿದ್ದ ಅತೀ ನಿಕಟತೆಯು ನಮ್ಮನ್ನು ಆಘಾತಗೊಳಿಸುತ್ತದೆ! ಅದು ಅಷ್ಟು ಅಗಾಧವಾದದ್ದು, ಆದಾಗ್ಯೂ ಅಷ್ಟು ವೈಯಕ್ತಿಕವಾದದ್ದು ಆಗಿತ್ತು! “ಅಬ್ಬಾ” ಎಂಬುದರ ಉಪಯೋಗಕ್ಕೆ ಎಲ್ಲಾ ಧಾರ್ಮಿಕ ಪ್ರಾರ್ಥನೆಗಳಲ್ಲಿ ಸಮಾನ ಪದವಿರುವದಿಲ್ಲ. ಅದು ದೇವರೊಂದಿಗೆ ಯೇಸುವಿನ ಅದ್ವಿತೀಯ ಸಂಬಂಧವನ್ನು, ಅದ್ವಿತೀಯ ದೇವರ ಕುಮಾರನನ್ನು ವ್ಯಕ್ತಪಡಿಸುತ್ತದೆ. ಅದೇ ಶಕ್ತಿಯುತವಾದ ಸಂಬಂಧವು ನಮ್ಮೊಂದಿಗೆ ಹಂಚಿಕೊಳ್ಳಲ್ಪಡಬೇಕೆಂದು ಯೇಸುವು ಸ್ಪಷ್ಟಪಡಿಸಿದನು (ನೋಡಿರಿ ಗಲಾತ್ಯ 4:6).

*ಪ್ರಾರ್ಥನೆಯಲ್ಲಿ ಅತೀ ದೊಡ್ಡ ಕೊಡುಗೆಯು ದೇವರು ತಾನೇ ಆಗಿದ್ದಾನೆ!*

"ನಮ್ಮ ತಂದೆ." ಯೇಸುವು ಲೋಕಕ್ಕೆ ದೇವರ ಅದ್ವಿತೀಯ ದೃಷ್ಟಿಕೋನವನ್ನು - ಪ್ರೀತಿಸುವ ತಂದೆಯ ದೃಷ್ಟಿಕೋನವನ್ನು ಕೊಡುತ್ತಾನೆ. ಇದು ಅನ್ಯಜಗತ್ತನ್ನು ಮಾತ್ರವೇ ಅಲ್ಲ, ಯೆಹೂದಿ ಜನಾಂಗವನ್ನೂ ಸಹ ಚಕಿತಗೊಳಿಸಿತು. ಯೆಹೂದ್ಯರು ದೇವರನ್ನು "ತಮ್ಮ ತಂದೆ" ಎಂದು ತಿಳಿದಿದ್ದರು, "ನಮ್ಮ ತಂದೆ" ಎಂಬುದಾಗಿ ಅಲ್ಲ. ಯೇಸುವು ತಾನು "ದೇವರ ಕುಮಾರನು" ಆಗಿದ್ದೇನೆಂದು ಹೇಳಿದ ಕಾರಣದಿಂದ ಕೆಲವು ರೀತಿಗಳಲ್ಲಿ ಯೆಹೂದ್ಯರು ಆತನನ್ನು ಶಿಲುಬೆಗೆ ಹಾಕಲಿಲ್ಲ. ಕ್ರಿಸ್ತನ ಸಮಯದಲ್ಲಿ ಯೆಹೂದ್ಯರು "ಮೆಸ್ಸೀಯ"ನಿಗಾಗಿ ಹಂಬಲಿಸುತ್ತಿದ್ದರು. ಆ ದಿನದಲ್ಲಿ "ಸುಳ್ಳು ಕ್ರಿಸ್ತರು" ಅನೇಕರಿದ್ದರೂ ಈ "ಮೆಸ್ಸೀಯನು" ದೇವರಾಗಿರಬೇಕಿತ್ತು; ದೇವರಿಂದ ಬರುವವನಾಗಬೇಕಿತ್ತು. ಅಕ್ಷರಶಃವಾಗಿ, ಯೆಹೂದ್ಯರು ಯೇಸುವು "ಮನುಷ್ಯಕುಮಾರನು" ಆಗಿದ್ದ ಕಾರಣದಿಂದ ಆತನನ್ನು ಶಿಲುಬೆಗೆ ಹಾಕಿದರು. ಆತನ ಸಾರ್ವತ್ರಿಕತೆಯು ಅವರ ಸಂಕುಚಿತತೆಯನ್ನು ನಾಶಮಾಡಿತು. ಆತನು ಅವರಿಗಾಗಿ ಮಾತ್ರವೇ ಅಲ್ಲ ಆದರೆ ಎಲ್ಲರಿಗಾಗಿ ಜೀವಿಸಿದನು ಮತ್ತು ಸತ್ತನು. ಆತನು ಅನ್ಯರಿಗೋಸ್ಕರವಾಗಿಯೂ ಸಹ ಸತ್ತನು! ಗರ್ವಿಗಳಾದ ಯೆಹೂದ್ಯರು ಈಸತ್ಯವನ್ನು ಸ್ವೀಕರಿಸಲಾರದವರಾಗಿದ್ದರು. ಕರ್ತನ ಪ್ರಾರ್ಥನೆಯ ಕೇಂದ್ರವಾದ ಮುಖ್ಯ ಪ್ರಸ್ತಾಪವು ಪ್ರತಿಯೊಬ್ಬ ವ್ಯಕ್ತಿಯ ಅಮೂಲ್ಯ ಬೆಲೆಯಾಗಿದೆ. ಆದಾಗ್ಯೂ, "ನಾನು" ಮತ್ತು "ನನಗೆ" ಎಂಬ ವೈಯಕ್ತಿಕ ನಾಮಪದಗಳು ಪ್ರಾರ್ಥನೆಯಲ್ಲಿ ಉಪಯೋಗಿಸಲ್ಪಟ್ಟಿರುವದಿಲ್ಲ. "ನಮ್ಮ ತಂದೆ" ಎಂಬುದು ಇಡೀ ಪ್ರಾರ್ಥನೆಯ ಧ್ವನಿಯನ್ನು ಏರ್ಪಡಿಸುತ್ತದೆ. ಇದು ಯೇಸುವು ಮೊದಲು ಬೋಧಿಸಿದ್ದು ಆರಾಧಿಸಲ್ಪಡುತ್ತಿರುವಾತನೊಂದಿಗೆ ವಿಶ್ವಾಸಿಯ ಸಂಬಂಧವಾಗಿತ್ತು ಎಂಬುದನ್ನು ನೋಡಲು ನಿರ್ಣಾಯಕವಾದದ್ದಾಗಿರುತ್ತದೆ. " 'ನಮ್ಮ ತಂದೆಯೆ' ಎಂದು ಹೇಳಿರಿ" ಎಂದು ಯೇಸು ಹೇಳಿದನು. ತಂದೆಯ ಪಿತೃತ್ವವು ಮನುಷ್ಯನ ಸಹೋದರತ್ವವನ್ನ ಅಗತ್ಯವಾಗಿ ಮಾಡುತ್ತದೆ. ಲೂಕ 15ರಲ್ಲಿ ಹಿರಿಯ ಮಗನು ತನ್ನ ಸಹೋದರನನ್ನು ದ್ವೇಷಿಸುವಾಗ ತನ್ನ ತಂದೆಯನ್ನು ಪ್ರೀತಿಸಲಾರನು ಎಂಬದನ್ನು ಕಲಿತುಕೊಳ್ಳಬೇಕಾಗಿತ್ತು. ದೇವರನ್ನು ಮಹಿಮೆ ಪಡಿಸಿರಿ. ದೇವರ ಭಯಭಕ್ತಿ ಹುಟ್ಟಿಸುವ ನಾಮವನ್ನು ಮಹಿಮೆಪಡಿಸಿರಿ! ಪರಿಪೂರ್ಣ ಸರ್ವಶಕ್ತ ದೇವರ ಸಾರ್ವಭೌಮತೆಯನ್ನು ಮಹಿಮೆಪಡಿಸಿರಿ!

## "ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ನೆರವೇರಲಿ"

ಪ್ರಾರ್ಥನೆಯು ದೇವರೊಂದಿಗೆ ಸಹವಾಸದಲ್ಲಿ ಇರುವುದಾಗಿದೆ. ಅದು ಒಂದು ಶಿಸ್ತು ಆಗಿರದೇ - ಅದು ಒಂದು ಸ್ನೇಹತ್ವ ಆಗಿರುತ್ತದೆ. ಅದೊಂದು ಅಭಿನಯವಾಗಿರದೇ - ಅದು ಒಂದು ಸಂಬಂಧವಾಗಿದೆ. ದೇವರ ರಾಜ್ಯವನ್ನು ಕುರಿತು ಇಂದು ಹಲವಾರು ತಪ್ಪುಗಳು ಮಾಡಲ್ಪಡುತ್ತಿವೆ: (1) ಕೆಲವು ಜನರು ಅದನ್ನು ಬಹಿಷ್ಕರಿಸಿದ್ದಾರೆ. ಅದು ಕೇವಲ ಕಡೆಗಣಿಸಲ್ಪಟ್ಟಿರುವದಿಲ್ಲ - ಅದು ಹೊರಗೆ ದೊಬ್ಬಲ್ಪಟ್ಟಿದೆ. "ರಾಜ್ಯ" ಎಂಬುದು ತಿಪ್ಪೆಗೆ ಎಸೆಯಲ್ಪಟ್ಟ ಇನ್ನೊಂದು ಬೈಬಲಿನ ಪದವಾಗಿದೆ. ಮನೋವಿಜ್ಞಾನವು ಒಳಗಿದೆ; ದೈವಜ್ಞಾನ ಶಾಸ್ತ್ರವು ಹೊರಗಿದೆ. ರಾಜ್ಯ? ಅದನ್ನು ಮರೆತುಬಿಡಿರಿ! (2) ಇತರರು ಅದನ್ನು ಸಂಸ್ಥೆಯಾಗಿ ಮಾಡುತ್ತಾರೆ. ದೇವರ ರಾಜ್ಯವು ನಮ್ಮ ಜೀವಿತಗಳಲ್ಲಿ ದೇವರ ಆಳಿಕೆ, ಸಿಂಹಾಸನ ಮತ್ತು ಅಧಿಕಾರ ಆಗಿರುತ್ತದೆ. ಅದು ಕ್ರಿಸ್ತನ ಸಭೆಯಂತೆ ಜೀವಿಸಲ್ಪಡುತ್ತದೆ.

"ದೇವರಿಗೆ ಹೇಳಲು ನನ್ನಲ್ಲಿ ಕೆಲವೊಂದು ಇದೆ" ಎಂದು ಸಾಮಾನ್ಯವಾಗಿ

ಪ್ರಾರ್ಥನೆಯಲ್ಲಿ ಯೋಚಿಸುತ್ತೇವೆ. "ದೇವರಿಗೆ ನಿನಗೆ ಹೇಳಲು ಕೆಲವೊಂದು ಇದೆ." ಎಂದು ಯೇಸುವು ಗಮನಿಸಿದನು. ಪ್ರಾರ್ಥನೆಯು *ನಮ್ಮ ಚಿತ್ತವನ್ನು* ಆಶೀರ್ವದಿಸು ಎಂದು ದೇವರನ್ನು ಕೇಳಿಕೊಳ್ಳುವದಕ್ಕಿಂತ ಹೆಚ್ಚಾದದ್ದಾಗಿದೆ - ಅದು *ಆತನ ಚಿತ್ತವನ್ನು* ಮಾಡಲಿಕ್ಕೆ ಕೆಲಸಕ್ಕೆ ಹಾಜರಾಗುವದಾಗಿದೆ! "ನಿನ್ನ ಚಿತ್ತವು ನೆರವೇರಲಿ" ಎಂದು ಪ್ರಾರ್ಥಿಸುವದನ್ನು ನಾವು ಕಲಿಯತಕ್ಕದ್ದು, "ನಿನ್ನ ಚಿತ್ತವು ಬದಲಾಗಲಿ" ಎಂದು ಅಲ್ಲ. ಪ್ರಾರ್ಥನೆಯು ಸ್ವಾರ್ಥವನ್ನಲ್ಲ, ಆದರೆ ದೇವರನ್ನು ಮೆಚ್ಚಿಸುವ ಗುರಿಯನ್ನಿಟ್ಟು ಕೊಂಡಿದೆ. "ನಿನ್ನ ಚಿತ್ತವು ನೆರವೇರಲಿ" ಎಂಬುದು ನನ್ನ ಸ್ವಂತ ಜೀವಿತನ ನಿಯಮವನ್ನು ಸ್ವಂತದಿಂದ ದೇವರಿಗೆ ಹಸ್ತಾಂತರಿಸುತ್ತದೆ. ಇದು ಸಮರ್ಪಣೆಯ, ಅಲ್ಲಗಳೆಯುವಿಕೆಯ, ಮರಣದ, ತ್ಯಜಿಸಿಬಿಡುವದರ, ಮತ್ತು ಒಪ್ಪಿಸಿಕೊಡುವಿಕೆಯ ಪ್ರಾರ್ಥನೆಯಾಗಿರುತ್ತದೆ. ನಿಜವಾದ ಪ್ರಾರ್ಥನೆಯ ಅಕ್ಷರಶಃ ಗುರಿಯು "ನಿನ್ನ ಚಿತ್ತವು ನೆರವೇರಲಿ" ಎಂದು ಹೇಳುವುದು, "ತಂದೆಯೇ, ಪರಲೋಕದ ಕಣ್ಣುಗಳ ಮುಖಾಂತರ ನಾನು ಭೂಲೋಕವನ್ನು ನೋಡಲೇ?" ಎಂದು ಬೇಡಿಕೊಳ್ಳುವುದು ಆಗಿರುತ್ತದೆ. ಪ್ರಾರ್ಥನೆಯು ಸ್ವಯಂ ಸಮರ್ಪಣೆಯಾಗಿರುತ್ತದೆ. ಪ್ರಾರ್ಥನೆಯು ಶಿಷ್ಯತ್ವದ ಉಸಿರಾಗಿರುತ್ತದೆ. ಪ್ರಾರ್ಥನೆಯಲ್ಲಿ ನಾವು ದೇವರನ್ನು ಸಂದರ್ಶಿಸದಿದ್ದರೆ, ನಾವು ಆತನನ್ನು ಸಂದರ್ಶಿಸುವದೇ ಇಲ್ಲ. ನಾನು ದೇವರನ್ನು ಮೆಚ್ಚಿಸುವ ಮಗುವಾಗ ಬೇಕೆಂದಿದ್ದೇನೆ! "ನಿನ್ನ ಚಿತ್ತವು ನೆರವೇರಲಿ." "ದೇವರ ರಾಜ್ಯವು ಬರುವಾಗ ಮಾತ್ರವೇ" ಆತನ ಚಿತ್ತವು ನೆರವೇರಬಲ್ಲದು! ಪ್ರಾರ್ಥನೆಯು, "ದೇವರ ಸಹಾಯದಿಂದ ನಿನ್ನ ಚಿತ್ತವು ಮಾಡಲ್ಪಡಲಿ" ಎಂಬುದಲ್ಲ, ಆದರೆ "ನನ್ನ ಸಹಾಯದಿಂದ ನಿನ್ನ ಚಿತ್ತವು ನೆರವೇರಲಿ" ಎಂಬುದಾಗಿ ಇರುತ್ತದೆ. ರಾಜ್ಯದಲ್ಲಿ ಇರುವುದು ಅಂದರೆ ದೇವರನ್ನು ಅರಸನನ್ನಾಗಿ ಮಾಡುವುದು ಆಗಿರುತ್ತದೆ. ಕ್ರಿಸ್ತನಿಗೆ ಒಂದೇ ರೀತಿಯ ಮನಸ್ಸಿರುವುದು,ಅದು ದೇವರ ಚಿತ್ತವನ್ನು ಮಾಡುವುದು. ಧರ್ಮವು ನಿಮ್ಮ ಮಾರ್ಗದಲ್ಲಿ ಹೋಗುವಾಗ ಮಾತ್ರವೇ ನೀವು ತೆಗೆದುಕೊಳ್ಳುವ ಬಸ್ಸಿನಂತೆ ಇರುವದಿಲ್ಲ. "ನಮಗೆ ಅಗತ್ಯವಾಗಿರುವಂಥದ್ದು, ಅದನ್ನು ಮಾಡುವದಕ್ಕೆ ನಿಶ್ಚಯಿಸಿಕೊಂಡ ತೀರ್ಮಾನದೊಂದಿಗೆ ದೇವರ ಇಡೀ ಚಿತ್ತವನ್ನು ತಿಳಿದುಕೊಳ್ಳಲು ಒಂದು ಅಪೇಕ್ಷೆಯಾಗಿದೆ." ಎಂದು ಜಾನ್ ವೆಸ್ಲಿ ಹೇಳಿದರು. "ನನ್ನಲ್ಲಿ ನನ್ನ ಯಾವುದನ್ನೂ ಬಿಡಬೇಡಿರಿ ..." ಒಬ್ಬ ಕವಿಮಾಡಿದಂತೆ ನಾವು ಪ್ರಾರ್ಥಿಸುವುದು ಅಗತ್ಯವಾಗಿದೆ. ಎರಡು ಸಂಗತಿಗಳನ್ನು ನಾವು ಜ್ಞಾಪಿಸಿಕೊಳ್ಳಬೇಕು: (1) ನಾವು ಆಲಿಸಿದರೆ ನಾವು ದೇವರನ್ನು ಕೇಳಿಸಿ ಕೊಳ್ಳುತ್ತೇವೆ, ಮತ್ತು (2) ದೇವರ ಚಿತ್ತದಲ್ಲಿ ಇರುವಾಗ ಕ್ರೈಸ್ತರು ಯಾವುದೇ ಸಂಗತಿಯನ್ನು ನಿರ್ವಹಿಸಬಹುದು.

## "ನಮ್ಮ ಅನುದಿನದ ಆಹಾರವನ್ನು ಈ ಹೊತ್ತು ದಯಪಾಲಿಸು"

ಧರ್ಮವು ಕೆಲವರಿಗೆ ವಿಚಿತ್ರವಾದ ಸಂಗತಿಗಳನ್ನು ಮಾಡುತ್ತದೆ. "ಅದ್ವಿತೀಯ ಧಾರ್ಮಿಕತೆಯುಳ್ಳವರು" ಭೂಲೋಕದ ಅಗತ್ಯತೆಗಳು ನಿತ್ಯವಾದ ಸಂಗತಿಗಳೊಂದಿಗೆ ಮಿಶ್ರಿತಗೊಂಡಿರುವದನ್ನು ಕಂಡುಕೊಳ್ಳುವಾಗ ಆಘಾತಕ್ಕೊಳಗಾಗುತ್ತಾರೆ. "ಅನೇಕರು ಭೂಲೋಕದ ಒಳ್ಳೆಯವರಾಗಿರದಷ್ಟು ಪಾರಲೌಕಿಕವಾದ ಮನಸ್ಸುಳ್ಳವರಾಗಿರುತ್ತಾರೆ." ತಂದೆಗೆ ಸಂಬಂಧಿಸಿದ ಯಾವುದೂ ನಮಗೆ ಸಂಬಂಧಿಸಿರುವದಿಲ್ಲ. ಈ ದೊಡ್ಡ ಪ್ರಾರ್ಥನೆಯ ಕೇಂದ್ರದಲ್ಲಿ ಯೇಸುವು ದೇವರ ಚಿತ್ತದಿಂದ ಭೂಲೋಕದ ರೊಟ್ಟಿಯ ಕಡೆಗೆ ಕೂಡಲೇ ತಿರುಗಿಕೊಳ್ಳುತ್ತಾನೆ. ಎಂಥಾ ರಕ್ಷಕನು! ಎಂಥಾ ಪ್ರಾರ್ಥನೆ! ದೇವರೊಂದಿಗೆ ಯಾವುದೂ ಸಾಮಾನ್ಯವಾದದ್ದಾಗಿರುವದಿಲ್ಲ.

ರೊಟ್ಟಿಯು "ಅನುದಿನದ" ಎಂದೂ ಹೇಳಲ್ಪಟ್ಟಿದೆ. ಯೇಸುವು "ನಾಳಿನರೊಟ್ಟಿಗಾಗಿ"

ಪ್ರಾರ್ಥಿಸಲಿಲ್ಲ. ಅದು ರೊಟ್ಟಿಯಾಗಿತ್ತು - ಕೇಕ್ ಆಗಲಿ ಮಸಾಲೆ ಪದಾರ್ಥಗಳಾಗಲೀ ಆಗಿರಲಿಲ್ಲ. ಮನ್ನವು ದಿನಕ್ಕೊಂದು ಸಲ ಮಾತ್ರವೇ ಕೂಡಿಸಲ್ಪಡಬಹುದಿತ್ತು. ದೇವರು ನಮಗೆ ಅನುದಿನವೂ ಒದಗಿಸುತ್ತಾನೆ. ಇದು ನಮ್ಮ ನಂಬಿಕೆಯಾಗಿದೆ.

ಇದು ಗ್ರಹಿಸಲು ನಮಗೆ ಕಷ್ಟತರವಾದದ್ದಾಗಿದೆ. ಯೇಸುವಿನ ಸಮಯದಲ್ಲಿ, ಇಂದು ಜಗತ್ತಿನಲ್ಲಿಯ ಅನೇಕ ಸ್ಥಳಗಳಲ್ಲಿಯಂತೆ, ಪ್ರತಿಯೊಂದು ದಿನವೂ ಬದುಕಿ ಉಳಿಯಲು ಹೋರಾಟವಾಗಿತ್ತು. ಸಮೃದ್ಧಿಯು ನಮ್ಮನ್ನು ಮೋಸಗೊಳಿಸುತ್ತದೆ. ಸಮೃದ್ಧಿಯುಳ್ಳವರಿಗೆ ಬಹಳಷ್ಟು - ಬಹುಶಃ ಅತೀಯಾಗಿ ಹೆಚ್ಚು ಇರುತ್ತದೆ. ಅವರು ಐಶ್ವರ್ಯವಂತರಾಗಿರುತ್ತಾರೆ ಮತ್ತು ಯಾವುದರ ಕೊರತೆಯು ಇರುವದಿಲ್ಲ - ಆದಾಗ್ಯೂ ದೇವರಲ್ಲಿ ಮಾತ್ರವೇ ನಾವು ಜೀವಿಸುತ್ತೇವೆ ಹಾಗೂ ಇರುತ್ತೇವೆ (ಅಪೊಸ್ತಲರ ಕೃತ್ಯಗಳು 17:28). ಮನುಷ್ಯನಿಗೆ ಅವನ ಅನುದಿನದ ಆಹಾರದ ಅಗತ್ಯತೆ ಇದೆ, ಮತ್ತು ಮನುಷ್ಯನಿಗೆ ದೇವರ ಅಗತ್ಯತೆ ಇದೆ.

## "ನಮ್ಮ ತಪ್ಪುಗಳನ್ನು ಕ್ಷಮಿಸು"

ಯೇಸುವು ಎಷ್ಟು ಬುದ್ಧಿವಂತನಾಗಿದ್ದನು! ಎಷ್ಟು ವ್ಯಾವಹಾರಿಕನಾಗಿದ್ದನು! "ಕ್ಷಮಿಸುವುದು ಇಲ್ಲವೇ ಕ್ಷಮಿಸದೆ ಇರುವುದು, ಪ್ರಶ್ನೆಯಾಗಿದೆ." ಪ್ರತಿದಿನದ ಆಹಾರದ ಅಗತ್ಯತೆಯುಳ್ಳವನಿಗೆ ಅನುದಿನದ ಕ್ಷಮಾಪಣೆಯ ಅಗತ್ಯತೆಯುಳ್ಳವನೂ ಆಗಿದ್ದಾನೆ. ದಿನಕ್ಕೊಂದು ಸಲ ನಾವು ಊಟಮಾಡುತ್ತೇವೆ. ಒಂದು ಸಲ ಒಂದು ದಿನ ನಾವು ರಕ್ಷಿಸಲ್ಪಡುತ್ತೇವೆ. ಕ್ಷಮಿಸಲಿಕ್ಕೆ ನಾವು ಕ್ಷಮಿಸಲ್ಪಡಬೇಕು. ನಾವು ಕ್ಷಮಿಸಲ್ಪಡಲು ಕ್ಷಮಿಸಬೇಕು. ನಾವು ಪ್ರಾರ್ಥಿಸುವದನ್ನು ಆಚರಿಸಬೇಕು. ಕ್ಷಮಾಪಣೆಯ ರಹಸ್ಯವು ಯಾವುದು? ದೇವರು ನಮ್ಮನ್ನು ಕ್ಷಮಿಸಿದ್ದನ್ನು ನಾವು ನೋಡತಕ್ಕದ್ದು. ನಾವೆಲ್ಲರೂ ದಾಟಿಹೋಗಬೇಕು, ಸೇತುವೆಯನ್ನು ನಾವು ನಾಶಮಾಡಬಾರದು. ಈ ಪ್ರಾರ್ಥನೆಯಲ್ಲಿ ಯೇಸುವು ಕ್ಷಮಾಪಣೆಯನ್ನು ಒತ್ತಿ ಹೇಳಿದ್ದಾನೆ. ನನಗೆ ದೇವರ ಕ್ಷಮಾಪಣೆಯ ಅಗತ್ಯತೆಯಿದೆ! ನಾನು ನಿನ್ನನ್ನು ಕ್ಷಮಿಸಬೇಕು! ಇದು ಜೀವನದಲ್ಲಿ ಸಮಸ್ಯೆಯಾಗಿದೆ. ಮಾನಸಾಂತರಪಡುವುದು, ಅರಿಕೆಮಾಡುವುದು, ಸಹಾಯಹೀನವಾಗಿರುವುದು ಕಠಿಣಾದದ್ದಾಗಿದೆ. "ನಮಗೆ ತಪ್ಪುಮಾಡಿದವರನ್ನು ನಾವು ಕ್ಷಮಿಸಿದಂತೆ" ಎಂಬುದು ಬಹಳ ಕಠಿಣವಾದ ಪದಗುಚ್ಛವಾಗಿದೆ.

ನಾವು ದೇವರ ಕ್ಷಮಾಪಣೆಯನ್ನು ಸ್ವೀಕರಿಸಬಹುದೋ? ನಾವು ಇತರರನ್ನು ಕ್ಷಮಿಸಬಹುದೋ? *ಶೋಧನೆಗಳು ಬಹಳವಾಗಿವೆ!* ಜೀವನವು ಗಂಡಾಂತರಕರವಾದದ್ದಾಗಿದೆ. ಸೈತಾನನು ಭೂಲೋಕದಲ್ಲಿ ಸಜೀವಿಯಾಗಿದ್ದು ಚೆನ್ನಾಗಿದ್ದಾನೆ. ಯೇಸುವು ಕೂಡಿಸಿದ ಎಲ್ಲಾ ಬೇಡಿಕೆಗಳು ಅಗತ್ಯತೆಗಳು ಒಪ್ಪಿಕೊಳ್ಳುವಿಕೆಗಳಾಗಿವೆ. ನಾವು ಸಹಾಯಹೀನರೂ ತಪ್ಪಿಹೋದವರೂ ಆಗಿದ್ದೇವೆ. ನಮಗೆ ದೇವರ ಅಗತ್ಯತೆಯಿದೆ. ನಮಗೆ ಸಹಾಯವು ಬೇಕು. ದೇವರ ಮಾರ್ಗದರ್ಶನವು ನಮ್ಮ ಸುರಕ್ಷೆಯಾಗಿದೆ. ಆತನು ನಮ್ಮನ್ನು ಸಹಿಸದಷ್ಟು ಶೋಧನೆಗಳಿಂದ ತಪ್ಪಿಸುವದಷ್ಟೇ ಅಲ್ಲ, ಅದರಿಂದ ತಪ್ಪಿಸಿಕೊಳ್ಳುವದಕ್ಕೆ ಮಾರ್ಗವನ್ನು ಒದಗಿಸುವನು (1 ಕೊರಿಂಥ 10:12, 13). ನಾವು ಉದ್ದವಾಗಿಯೂ ಗಟ್ಟಿಯಾಗಿಯೂ ಪ್ರಾರ್ಥಿಸುತ್ತೇವೆ. ಯೇಸುವು ಕೇವಲ ಆರು ವಾಕ್ಯಗಳಲ್ಲಿ ಪ್ರಾರ್ಥನೆಯನ್ನು ಕಲಿಸಿದನು! ಈ ಪ್ರಾರ್ಥನೆಯನ್ನು ಪ್ರಾರ್ಥಿಸುವುದು ನಮ್ಮ ಹೃದಯಗಳಲ್ಲಿ ದೀನತೆಯನ್ನೂ ಉದ್ದವಾದ ಪ್ರಾರ್ಥನೆಗಳು ಕೊಡಲಾರದ ಅವಲಂಭನೆಯನ್ನೂ ಸಾಧಿಸುವುದು.

ಯೇಸುವು ಈ ಪ್ರಾರ್ಥನೆಯನ್ನು ದೇವರೊಂದಿಗೆ ಪ್ರಾರಂಭಿಸಿದನು; ಆತನು

ಅದನ್ನು ದೇವರೊಂದಿಗೆ ಮುಗಿಸಿದನು: "ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಸದಾಕಾಲ ನಿನ್ನವೇ ..." (ಮತ್ತಾಯ 6:13). *ಆಮೆನ್ ಮತ್ತು ಆಮೆನ್*!

***"ಕರ್ತನೇ, ನಾನು ಪ್ರಾರ್ಥನೆಯಲ್ಲಿ ನಂಬಿಕೆ ಇಡುವದಿಲ್ಲ.***
***ನಾನು ನಿನ್ನಲ್ಲಿ ನಂಬಿಕೆಯಿಡುತ್ತೇನೆ.***
***ನಂಬಿಕೆಯಲ್ಲಿ ಪ್ರಾರ್ಥಿಸುವದನ್ನು ನನಗೆ ಕಲಿಸು."***

© 2009 Truth for Today